ಓಎಸ್ ನಂ 21/2022
ಪಿ. ಡಬ್ಯೂ. 01

**ಸಾಕ್ಷಿಯನ್ನು ದಿಃ 25.07.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀವಾಯ್.ಆರ್.ಹೆಚ್. ವಕೀಲರಿಂದ.**

ನಾನು 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ.ನಮ್ಮ ಸ್ವಂತ ಕುಣಿಗಲ್ ಆಗಿರುತ್ತದೆ. ದಾವಾ ಸ್ವತ್ತು ಕುಣಿಗಲ್ ನಿಂದ 5-6 ಕೀ ಮೀಟರ ದೂರದಲ್ಲಿದೆ. ಅರಕೆರೆ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಪಿತ್ರಾರ್ಜಿತ ಮತ್ತು ಸ್ವಯಾರ್ಜಿತ ಆಸ್ತಿ ಇರುವುದಿಲ್ಲ. ಸದರಿ ಗ್ರಾಮದಲ್ಲಿ ನಮ್ಮ ಸಂಬಂಧಿಕರು ಸಹ ಇರುವುದಿಲ್ಲ. ಪ್ರತಿವಾದಿ ಮತ್ತು ಅವರ ಕುಟುಂಬದವರು ನನ್ನ ಸಂಬಂಧಿ ಆಗಿರುವುದಿಲ್ಲ ಪರಿಚಯ ಇರುತ್ತದೆ. ಈ ವ್ಯವಹಾರವನ್ನು ಹೊರತುಪಡಿಸಿ ನನ್ನ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ವ್ಯವಹಾರ ಆಗಿರುವುದಿಲ್ಲ.

ಪ್ರತಿವಾದಿ1 ಅವರ ಕುಟುಂಬದಲ್ಲಿ ಎಷ್ಟು ಜನ ಇದ್ದಾರೆ ಅವರು ಎಲ್ಲಿ ವಾಸ ಇದ್ದಾರೆಂದು ನನಗೆ ಗೊತ್ತಿದೆ. ಪ್ರತಿವಾದಿ 1 ಅವರ ಗಂಡನ ಹೆಸರು ಸಿಕಂದರ ಆಗಿರುತ್ತದೆ. ಅವರಿಗೆ 4 ಜನ ಮಕ್ಕಳು ಇರುತ್ತಾರೆ. ಅವರುಗಳೆಂದರೆ ಅಬ್ದುಲ್ ರಶೀದ್, ಮೊಹಿಬೂಬ ಪಾಷಾ, ಖಾದಿರಖಾನ್ ಮತ್ತು ಇನ್ನೊಬ್ಬರ ಹೆಸರು ನನಗೆ ಗೊತ್ತಿಲ್ಲ. ಪ್ರತಿವಾದಿ 1 ಅವರು 4 ಜನ ಮಕ್ಕಳಲ್ಲಿ ಮೊದಲನೆಯವರು ಯಾರು 2ನೇಯವರು ಯಾರು ಎಂದು ನನಗೆ ಗೊತ್ತಿರುವುಲ್ಲ. ಪ್ರತಿವಾದಿ 1 ಅವರಿಗೆ ಎಷ್ಟು ಜನ ಹೆಣ್ಣು ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 2 ರಿಂದ 5 ಅವರ ಹೆಂಡತಿ ಮತ್ತು ಮಕ್ಕಳ ಹೆಸರು ಏನೆಂದು ನನಗೆ ಗೊತ್ತಿರುವುದಿಲ್ಲ.

ಪ್ರತಿವಾದಿ 1 ಅವರು ಕುಟುಂಬಕ್ಕೆ ಸಂಬಂಧಿಸಿದಂತೆ ಆಸ್ತಿಗೆ ಯಾರು ವಾರಸ್ಸುದಾರರೆಂದು ತಿಳಿದುಕೊಳ್ಳಲು ತಹಸಿಲ್ದಾರ ಕಚೇರಿಯಿಂದ ವಂಶವೃಕ್ಷ ಪಡೆದಿರುವುದಿಲ್ಲ. ಪ್ರತಿವಾದಿಗಳ ಮನೆ ಅರೆಕೆರೆಯಲ್ಲಿ ಎಲ್ಲಿದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತುಗಳು ಅರೆಕೆರೆ ಗ್ರಾಮದಲ್ಲಿರುವ ಕೆರೆಯ ಹಿಂದುಗಡೆ ಬರುವುದಿಲ್ಲ ಮುಖ್ಯ ರಸ್ತೆಯ ಪಕ್ಕ ಇರುತ್ತವೆ ಎಂದು ಹೇಳುತ್ತಾರೆ.

ದಾವಾ ಸ್ವತ್ತುನ್ನು ಹೊರತುಪಡಿಸಿ ಪ್ರತಿವಾದಿ ಕುಟುಂಬಕ್ಕೆ ಅರೆಕೆರೆ ಗ್ರಾಮದಲ್ಲಿ ಎಷ್ಟು ಆಸ್ತಿಗಳು ಇವೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಮೂಲ ಯಾರಿಗೆ ಸೇರಿದ್ದು ಎನ್ನುವ ಬಗ್ಗೆ ದಾಖಲೆಗಳನ್ನು ನಾನು ನೋಡಿರುತ್ತೇನೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ನಿಶಾನೆ ಆದ ದಾಖಲೆಗಳನ್ನು ತೋರಿಸಿ ಮೂಲ ದಾಖಲೆಗಳು ಇರುವುದಿಲ್ಲವೆಂದು ಕೇಳಿದಾಗ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ.

ನನಗೆ ಕುಣಿಗಲ್ ನಲ್ಲಿ ವಾಸು ಎಂದು ಕರೆಯುತ್ತಾರೆ ಎಂದರೆ ಸರಿ. ನನ್ನ ಖಾತೆ ಪಹಣಿ ಎಂ.ಆರ್ ಮತ್ತು ಸ್ಕೇಚ್ ನ ಬಗ್ಗೆ ಅರಿವು ಇರುತ್ತದೆ. ಅದೇರೀತಿ ನನಗೆ ಕ್ರಯ ಪತ್ರ, ದಾನ ಪತ್ರ ಮತ್ತು ವಿಭಾಗ ಪತ್ರದ ಬಗ್ಗೆ ಗೊತ್ತಿದೆ. ಈಗ ಸರ್ಕಾರದ ಆದೇಶದ ಪ್ರಕಾರ ಸಾಲದ ಭದ್ರತೆಗಾಗಿ ಯಾವುದೇ ದಾಖಲೆಗಳನ್ನು ನೊಂದಣಿ ಮಾಡುವುದಿಲ್ಲವೆಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ನಾನು ಬ್ಯಾಂಕನಲ್ಲಿ ಸಾಲ ಪಡೆದಿರುತ್ತೇನೆ. ವ್ಯಕ್ತಿಗಳ ಬಳಿ ಪಡೆದಿರುವುದಿಲ್ಲ. ವಕೀಲರಾದ ಬಾನುಪ್ರಕಾಶ ನನಗೆ ಗೊತ್ತು. ಅವರ ಮತ್ತು ನನ್ನ ನಡುವೆ ದಾಖಲೆಗಳು ಆಗಿರುತ್ತವೆ. ಹಣಕಾಸಿನ ವ್ಯವಹಾರಕ್ಕೆ ನನ್ನ ಮತ್ತು ಅವರ ನಡುವೆ ದಾಖಲೆ ಆಗಿದ್ದು ನಂತರ ಅದು ರದ್ದಾಗಿರುತ್ತದೆ. ಸದರಿ ದಾಖಲೆಸಹ ಕ್ರಯದ ಕರಾರು ಪತ್ರವೆಂದು ಆಗಿದ್ದು ಆಧಾರ ಪತ್ರವೆಂದು ಆಗಿರುವುದಿಲ್ಲವೆಂದರೆ ಸರಿ.

ಈಗ 10 ರಿಂದ 15 ವರ್ಷಗಳಿಂದ ಹಣದ ಭದ್ರತೆಗಾಗಿ ಕರಾರು ಪತ್ರಗಳು ಆಗುತ್ತಿದ್ದು ಆದಾರ ಪತ್ರ ಆಗುತ್ತಿಲ್ಲವೆಂದರೆ ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ. ನಾನು ಇಲ್ಲಿಯವರೆಗೆ ಯಾವುದೇ ಪತ್ರ ವ್ಯವಹಾರಕ್ಕೆ ಭಾಗಿ ಆಗಿರುವುದಿಲ್ಲ. ನಾನು ಕೌನ್ಸಿಲರ್ ಆಗಿರುವ ಕಾರಣ ಹಣವನ್ನು ನೀಡುವುದು ಮತ್ತು ನಂತರ ಮರಳಿ ಪಡೆಯುವುದು ಮಾಡುತ್ತೇನೆ ಎಂದರೆ ಸರಿಯಲ್ಲ. ಕುಣಿಗಲ್ ನ ಜನರಿಗೆ ವಾಸಣ್ಣ ಕಷ್ಟದಲ್ಲಿರುವವರಿಗೆ ಹಣ ಕಾಸನ್ನು ನೀಡಿ ವಾಪಸ್ಸು ಪಡೆಯುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.